

## ಸಮುದ್ರ ಮಥನ

### ಉತ್ತಮ ವಿಶ್ಲೇಷಣೆ




ಮುಖಪುಟ ಲೇಖನದಲ್ಲಿ ಓಂಶಿವಪ್ರಕಾಶ್ ಅವರು 'ಸಾಮಾಜಿಕ ಜಾಲತಾಣ'ಗಳ ಬಗ್ಗೆ ಚೆನ್ನಾಗಿ ವಿಶ್ಲೇಷಿಸಿದ್ದಾರೆ.

–ಅಬ್ದುಲ್ ವಹಾಬ್ ಮುಲ್ಲಾ, ಗಂಗಾವತಿ

### ಸುಂದರ ಚಿತ್ರ ಬರಹ

ಕೇಶವ ಕುಡ್ಲರ 'ಒಣ ಮರದಲ್ಲಿ ಜೀವ ಸಂಚಾರ' ಚಿತ್ರ ಬರಹ ಸುಂದರವಾಗಿದೆ.

–ಡಾ. ವೇಣುಗೋಪಾಲ ಶರ್ಮಾ, ಗುರುವಾಯನಕೆರೆ

### ಹೀಗೂ ಉಂಟೆ?

ವಿನಾಯಕ ಭಟ್‌ರ 'ಆಮ್‌ಸ್ಟರ್‌ಡ್ಯಾಮ್ ಎಂಬ ಕಾಮ ಕವನ' ಓದಿ ವಿಚಿತ್ರ, ವಿಶಿಷ್ಟ ಎನಿಸಿತು. ಕಾಮ– ದ ಮ್ಯೂಸಿಯಂ ವಿಷಯ ಕೇಳಿ 'ಹೀಗೂ ಉಂಟೆ' ಎನಿಸಿತು.

–ಸಂತೇಬೆನ್ನೂರು ಫೈಜ್ನಟ್ರಾಜ್/ ಎಚ್.ಆನಂದಕುಮಾರ್, ಚಿತ್ರದುರ್ಗ/ ಎಸ್.ನಿತ್ಯ ರತ್ನಗಿರಿ, ಮೂಡಬಿದರೆ

### ಖಂಡನೀಯ

ಸರ್ಕಾರದ ಬೊಕ್ಕಸ ತುಂಬಲಿಕ್ಕಾಗಿಯೇ ಮುಕ್ತ ಸೆಕ್ಸ್‌ಗೆ ಅವಕಾಶ ನೀಡಿರುವುದು ಖಂಡನೀಯ.

–ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು

### ಸಕಾಲಿಕ ಪರಿಚಯ

ಶಿಕ್ಷಣದ ಮೂಲಕವೇ ಸಮಾಜದ ಬದಲಾವಣೆ ಸಾಧ್ಯ ಎಂದು ಪ್ರತಿಪಾದಿಸುತ್ತಿರುವ ಶಿಕ್ಷಕ ಆನಂದ ಕುಮಾರ್‌ರನ್ನು ರಾಘವೇಂದ್ರ ತೊಗರ್ಸಿ ಪರಿಚಯಿಸಿರುವುದು ಸಕಾಲಿಕ.

–ಎಂ.ಎಲ್. ಲಕ್ಷ್ಮಣರಾವ್, ದಾವಣಗೆರೆ/ ತರಂಗಿಣಿ, ತುಮಕೂರು

### ಮಾಹಿತಿಪೂರ್ಣ ಬರಹ

'ಕಮಲ್ ವಿಶ್ವರೂಪ ದರ್ಶನಂ' ಬಿಂದು ಬರಹ ಸಾಕಷ್ಟು ಮಾಹಿತಿ ನೀಡಿತು.

–ಎ. ಅಬೂಬಕ್ಕರ್ ಅನಿಲಕಟ್ಟೆ, ವಿಟ್ಲ

### ಓದುಗರಿಗೆ ಹೆಮ್ಮೆಯ ವಿಷಯ

'ಬೀಚಿ ಎಂಬ ಉತ್ತರಭೂಪ' ಗುಡಿಹಳ್ಳಿ ನಾಗರಾಜರ ಬರಹ ಬಹಳಷ್ಟು ಮಾಹಿತಿ ನೀಡಿದೆ. ಬೀಚಿ ಉತ್ತರ ನೀಡುತ್ತಿದ್ದ 'ನೀವು ಕೇಳಿದಿರಿ?' ಆಧರಿಸಿ ನಾಟಕ ಬಂದಿರುವುದು ಸುಧಾ ಓದುಗರಿಗೆ ಹೆಮ್ಮೆಯ ವಿಷಯ.

–ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ/ ಸುರೇಶ ಅಂಗಡಿ, ಹೂವಿನ ಹಡಗಲಿ/ ಡಾ.ಜಿ.ಕೃಷ್ಣಪ್ಪ, ಬೆಂಗಳೂರು/ ಡಿ.ಎಲ್.ನಾಗರಾಜ್, ಚನ್ನಗಿರಿ/ ಸು.ವಿಜಯಲಕ್ಷ್ಮಿ, ಶಿವಮೊಗ್ಗ/ರವೀಂದ್ರನಾಥ ಯಡಹಳ್ಳಿ, ಬೀಳಗಿ/ ಮಧೂರು ಮೋಹನ ಕಲ್ಲೂರಾಯ, ಕುಂದಾಪುರ

### ಬೀchi... ರಂಗಮಂದಿರ

ಹರಪನಹಳ್ಳಿ– ಹೊಸಪೇಟೆ ರಸ್ತೆಯ ಕಣಿವೆಯಳ್ಳಿಯಲ್ಲಿ ರಂಗಮಂದಿರಕ್ಕೆ ಬೀchi ಹೆಸರಿಟ್ಟು ಗೌರವ ಸಲ್ಲಿಸಲಾಗಿದೆ. ಒಂದಕ್ಷರ ಕನ್ನಡದಲ್ಲಿ ಮತ್ತೊಂದು ಇಂಗ್ಲಿಷ್ ನಲ್ಲಿ ಏಕಿದೆ? ಎಂಬ ಪ್ರಶ್ನೆಗೆ ಸುಧಾ ಓದಿದ ಮೇಲೆ ಉತ್ತರ ಸಿಕ್ಕಿತು.

–ಮಂಜವ್ವ ಜೋಗತಿ, ಮರಿಯಮ್ಮನಹಳ್ಳಿ

### ಕೂದಲಿನ ಮೌಲ್ಯ!

'ಕೂದಲು ಕಸವಲ್ಲ, ದುಬಾರಿ!' (ಡಾ. ಅರುಣ್ ಇಸ್ಲೂರ್) ಲೇಖನ ಕುತೂಹಲಕಾರಿಯಾಗಿತ್ತು.

–ಬಿ.ಎನ್. ಸೋಲ್ಲಾಪುರೆ, ಬೀದರ್

### ವಿಭಿನ್ನ ನಿರೂಪಣೆಯ ಕಥೆ

'ತಿಕ್ಕಲು ಮುದುಕಿ ನಾನಿ ಆಗಿದ್ದು' ಎಸ್.ಜಿ. ತುಂಗರೇಣುಕರ ಕಥೆ ವಿಭಿನ್ನ ನಿರೂಪಣೆಯಿಂದ ಓದಿಸಿಕೊಂಡು ಹೋಯಿತು.

–ಜ್ಯೋತಿ ಉಮೇಶ್, ಬೆಂಗಳೂರು/ ಬಿ.ಎಸ್. ಮುಳ್ಳೂರ, ಹಲಗತ್ತಿ/ ಕೊ.ಸು. ನರಸಿಂಹಮೂರ್ತಿ, ಮೈಸೂರು

### ಸುಖೀಭವ ಆದರ್ಶಪ್ರಾಯ

ಡಾ. ವಿನೋದ ಛಬ್ಬಿ ಸುಖೀಭವದಲ್ಲಿ ಹದಿ ಹರೆಯದವರಿಗೆ ನೀಡುವ ಸಲಹೆಗಳು ಆದರ್ಶಪ್ರಾಯವಾಗಿವೆ.

–ಡಿ.ಎಲ್. ನಾಗರಾಜ್, ಚನ್ನಗಿರಿ

### ನಾಯಿ ಅಲ್ಲ, ಬೆಕ್ಕು

ಫೆ.9ರ 'ಸುಧಾ' 'ಎಳೆಯರ ಅಂಗಳ'ದ ಒಗಟುಗಳು ಗೊತ್ತೆ? ಪಟ್ಟಿಯಲ್ಲಿ 12ನೆಯ ಒಗಟು ಗಿರಿರಾಜನ ಮಗಳ (ಗಿರಿಜೆ) ಗಂಡ (ಶಿವ)ನ ಹಿರಿಮಗ (ಸುಬ್ರಹ್ಮಣ್ಯ)ನ ತಮ್ಮ (ಗಣಪ)ನ ವಾಹನದ (ಇಲಿ) ವೈರಿ– ನಾಯಿ ಹೇಗಾದೀತು? ಬೆಕ್ಕು ಆಗಬೇಕಿತ್ತಲ್ಲವೆ?

–ಎಸ್.ಕೆ. ಗೀತಾ, ಹಾಸನ